# ನಿಮ್ಮೊಡನೆ

## ಮರಗಳನ್ನೇಕೆ ಕಡಿಯುತ್ತೀರಿ?

ಬೆಂಗಳೂರು ಬೆಳೆಯುತ್ತಿದೆ, ಜನಸಂಖ್ಯೆ ಒಂದು ಕೋಟಿ ಸಮೀಪಿಸಿದೆ. ಈ ವರ್ಷದ ಫೆಬ್ರುವರಿ ವೇಳೆಗೆ ನಗರದಲ್ಲಿ ವಾಹನಗಳ ಸಂಖ್ಯೆ 60 ಲಕ್ಷ ದಾಟಿದೆ ಎನ್ನುವುದು ಅಧಿಕೃತ ಅಂಕಿ ಅಂಶ. ಜತೆಗೇ ಮಾರ್ಚ್ ತಿಂಗಳಲ್ಲಿ ಒಂದು ಲಕ್ಷ ಹೊಸ ವಾಹನಗಳ ಸೇರ್ಪಡೆ ಆಗಿದೆಯಂತೆ. ತಿಂಗಳಿಗೆ ಒಂದು ಲಕ್ಷ ವಾಹನಗಳ ಸೇರ್ಪಡೆ ಎಂದು ಲೆಕ್ಕ ಹಾಕಿದರೂ ಸೆಪ್ಟೆಂಬರ್ ಹೊತ್ತಿಗೆ ನಗರದ ಒಟ್ಟು ವಾಹನಗಳ ಸಂಖ್ಯೆ 67 ಲಕ್ಷ ದಾಟಿದೆ. ರಸ್ತೆಗಳನ್ನು ಅಗಲ ಮಾಡುವುದು, ಫ್ಲೈಓವರ್‌ಗಳನ್ನು ನಿರ್ಮಿಸುವುದು, ಮೆಟ್ರೊ ರೈಲು ಮಾರ್ಗ ವಿಸ್ತರಣೆ– ಹೀಗೆ ನಗರದ ಸಂಚಾರ ಒತ್ತಡವನ್ನು ನಿಭಾಯಿಸಲು ಸರ್ಕಾರ ಹತ್ತಾರು ಉಪಾಯಗಳನ್ನು ಕಂಡುಕೊಂಡಿದೆ. ಪ್ರತಿದಿನವೂ ಬಂದ ಸೇರುವ ಸಹಸ್ರಾರು ವಲಸಿಗರಿಗೆ ಓಡಾಡಲು ರಸ್ತೆ, ಕುಡಿಯಲು ನೀರು, ತಲೆ ಮೇಲೊಂದು ಸೂರು ಕೊಟ್ಟು ಸಲಹುವ ಮಾತೃಹೃದಯ ಬೆಂಗಳೂರಿನದ್ದು. ಆದರೆ ಅಭಿವೃದ್ಧಿಯ ಈ ನಾಗಾಲೋಟದಲ್ಲಿ ಬೆಂಗಳೂರು ನಗರ ತನ್ನ ಒಡಲಲ್ಲಿರುವ ಸಹಸ್ರಾರು ಮರಗಳನ್ನು ಕಳೆದುಕೊಳ್ಳುತ್ತಿರುವುದು ದುರಂತ.

ಕಳೆದ ಐದಾರು ವರ್ಷಗಳಿಂದ ಬೆಂಗಳೂರು ನಗರದಲ್ಲಿ 40–50 ವರ್ಷಗಳಿಗಿಂತ ಹಳೆಯ ಬೃಹತ್ ಮರಗಳನ್ನು ಕಡಿಯುವ ಮೂಲಕ ಇಡೀ ಪರಿಸರಕ್ಕೆ ವಿಷ ತುಂಬುವ ಕೆಲಸ ಭರದಿಂದ ಸಾಗಿದೆ. 2011ರಿಂದ 14ರವರೆಗಿನ ಅವಧಿಯಲ್ಲಿ ನಮ್ಮ ಮೆಟ್ರೊ ರೈಲು ಮಾರ್ಗಗಳಿಗಾಗಿ 9281 ಮರಗಳನ್ನು ಕಡಿಯಲಾಗಿದೆ! ಕೆಲವು ತಿಂಗಳ ಹಿಂದೆ ರಸ್ತೆ ಅಗಲ ಮಾಡಲು ಜಯನಗರದಲ್ಲಿ 21 ಮರಗಳನ್ನು ಕಡಿದು ಉರುಳಿಸಲಾಯಿತು. ಇತ್ತೀಚೆಗೆ ನೃಪತುಂಗ ರಸ್ತೆಯಲ್ಲಿ 18 ಮರಗಳನ್ನು ಕಡಿಯಲು ನಿರ್ಧಾರ ಮಾಡಲಾಗಿತ್ತು. ಜನರ ತೀವ್ರ ಪ್ರತಿಭಟನೆಯಿಂದಾಗಿ ಕಡಿಯುವ ಮರಗಳ ಸಂಖ್ಯೆಯನ್ನು 5ಕ್ಕೆ ಇಳಿಸಲಾಯಿತು. ಈಗ ಮತ್ತೊಂದು ಉಕ್ಕಿನ ಮೇಲ್ಸೇತುವೆ (ಸ್ಟೀಲ್ ಫ್ಲೈಓವರ್) ಯೋಜನೆ ಧುತ್ತೆಂದು ಎದುರಿಗೆ ನಿಂತಿದೆ. ಶಾಸಕರ ಭವನದ ಬಳಿಯ ಬಸವೇಶ್ವರ ವೃತ್ತದಿಂದ ಹೆಬ್ಬಾಳ ಫ್ಲೈಓವರ್ ವರೆಗೆ ಸುಮಾರು 6.7 ಕಿ.ಮೀ ಉದ್ದದ ಸ್ಟೀಲ್ ಫ್ಲೈ ಓವರ್ ಯೋಜನೆ ಜಾರಿಗೆ 812 ಮರಗಳನ್ನು ಕಡಿಯಲು ಸರ್ಕಾರ ಮುಂದಾಗಿದೆ. ಈ ಮರಗಳಲ್ಲಿ 19 ಪ್ರಮುಖ ತಳಿ ವೈವಿಧ್ಯಗಳಿವೆ. 'ಈ ಮರಗಳನ್ನು ಕಡಿಯಬೇಡಿ, ಸ್ಟೀಲ್ ಫ್ಲೈಓವರ್ ಯೋಜನೆ ಕೈಬಿಡಿ' ಎಂದು ಸಾರ್ವಜನಿಕರು ಪ್ರತಿಭಟನೆಯ ಹಾದಿ ಹಿಡಿದಿದ್ದಾರೆ. ಆದರೆ ಸರ್ಕಾರ ಸಂಚಾರ ದಟ್ಟಣೆಯ ನೆಪ ಹೂಡಿ, ಮರಗಳನ್ನು ಕಡಿದೇ ಸಿದ್ಧ ಎಂದಿದೆ.

ನಾವು ಭಾರತೀಯರು ಮರಗಳನ್ನು ದೈವಾಂಶ ಸಂಭೂತವೆಂದು ಪೂಜೆ ಮಾಡುವವರು. ಆದರೆ ಅಭಿವೃದ್ಧಿಯ ವಿಷಯ ಬಂದಾಗ, ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿಯುತ್ತೇವೆ. ಅದೇ ವಿದೇಶಗಳಲ್ಲಿ ಮರಗಳ ಬಗ್ಗೆ ಈ ಭಾವನೆ ಇಲ್ಲವಾದರೂ, ನಮ್ಮಂತೆ ಕಟುಕರಾಗಿ ಅವರು ಮರಗಳನ್ನು ಉರುಳಿಸುವುದಿಲ್ಲ. ನಮ್ಮ ಪೂಜೆ, ಪುನಸ್ಕಾರಗಳೆಲ್ಲ ಆತ್ಮವಂಚನೆಯ ಜಾಲದಂತೆ ಕಾಣಿಸುತ್ತದೆ! ವಿದೇಶಗಳಲ್ಲಿ ಮರಗಳನ್ನು ಕಡಿಯುವ ಪ್ರಸಂಗ ಬಂದಾಗ ವೈಜ್ಞಾನಿಕ ವಿಧಾನಗಳನ್ನು ಬಳಸಿ ಸ್ಥಳಾಂತರ ಮಾಡುವುದಿದೆ. 'ಸ್ಟೀಲ್ ಫ್ಲೈ ಓವರ್ ಎದ್ದೇಳುವ ಪ್ರದೇಶದ ಮರಗಳನ್ನು ಏಕೆ ಸ್ಥಳಾಂತರ ಮಾಡಬಾರದು..' ಎಂದು ಪರಿಸರಪ್ರಿಯರು ಕೇಳಿರುವ ಪ್ರಶ್ನೆಗೆ ಅಧಿಕಾರಿಗಳು ಸಾಧ್ಯವಿಲ್ಲ ಎಂದಿದ್ದಾರೆ. 'ಇವುಗಳಲ್ಲಿ 56 ಮರಗಳನ್ನು ಸ್ಥಳಾಂತರ ಮಾಡಬಹುದು. ಆದರೆ ಉಳಿದೆಲ್ಲ ಮರಗಳು 40 ವರ್ಷಗಳಿಗೂ ಹಿಂದಿನ ಭಾರೀ ಮರಗಳಾಗಿರುವುದರಿಂದ ಸ್ಥಳಾಂತರ ದುಬಾರಿಯಾಗುತ್ತದೆ' ಎಂದಿದ್ದಾರೆ!

ನಮ್ಮ ಆಡಳಿತಶಾಹಿಗೆ ಮರಗಳ ಮಹತ್ವದ ಬಗ್ಗೆ ಚಿಕ್ಕಾಸಿನ ಜ್ಞಾನವೂ ಇದ್ದಂತೆ ಕಾಣುತ್ತಿಲ್ಲ. ಅಥವಾ ಅವರು ಹಾಗೆ ನಟಿಸುತ್ತಿರಬಹುದು. ವಿಷವಾಯುಗಳಾದ ಸಲ್ಫರ್ ಆಕ್ಸೈಡ್, ಕಾರ್ಬನ್ ಮೊನಾಕ್ಸೈಡ್‌ಗಳನ್ನು ಹೀರಿಕೊಂಡು ಮನುಷ್ಯರ ಪ್ರಾಣವಾಯು ಆಮ್ಲಜನಕ ಉತ್ಪಾದಿಸುವ ಮರಗಳ ಮಹತ್ವ ಬಣ್ಣಿಸಲಸದಳ. ಒಂದು ದೊಡ್ಡ ಮರ ನಾಲ್ಕು ಜನರಿಗೆ ಇಡೀ ದಿನ ಉಸಿರಾಡುವಷ್ಟು ಆಮ್ಲಜನಕವನ್ನು ಬಿಡುಗಡೆ ಮಾಡುತ್ತದೆ. ನೀವು 26000 ಮೈಲಿಗಳಷ್ಟು ದೂರ ಕಾರು ಓಡಿಸಿದಾಗ ಎಷ್ಟು ಹೊಗೆ ಬಿಡುತ್ತದೋ ಅಷ್ಟನ್ನು ಒಂದು ಎಕರೆಯಲ್ಲಿರುವ ಮರಗಳು ಹೀರಿಕೊಳ್ಳುತ್ತವೆ. ಮನೆಯ ಸುತ್ತ ಮೂರು ಮರಗಳನ್ನು ಬೆಳೆಸಿದರೆ ನಿಮ್ಮ ಏರ್‌ಕಂಡಿಷನ್‌ನ ಅರ್ಧ ವಿದ್ಯುತ್ ಬಿಲ್ ಉಳಿಸಬಹುದು. ಆಮ್ಲಜನಕ, ಹಣ್ಣು ಹಂಪಲು, ನೆರಳು ನೀಡುವ, ಮಣ್ಣಿನ ಸವಕಳಿ ತಡೆಯುವ, ಮಳೆಯ ನೀರು ಮತ್ತು ಹವೆಯನ್ನು ಸ್ವಚ್ಛಗೊಳಿಸುವ ಅದ್ಭುತ ಸಾಮರ್ಥ್ಯದ ಮೂಲಕ ಮನುಕುಲಕ್ಕೆ ಸಂಜೀವಿನಿಯಾಗಿರುವ ಮರಗಳ ಬಗ್ಗೆ ನಮಗೇಕಿಷ್ಟು ನಿಷ್ಕಾರುಣ್ಯ?

■ ಬಿ.ಎಂ.ಹನೀಫ್

ವಿಷಾನಿಲಗಳನ್ನು ಹೀರಿ, ಆಮ್ಲಜನಕ ಒದಗಿಸುವ; ಹಣ್ಣು ಹಂಪಲು, ನೆರಳು ನೀಡುವ, ಮಣ್ಣಿನ ಸವಕಳಿ ತಡೆಯುವ, ಮಳೆಯ ನೀರು ಮತ್ತು ಹವೆಯನ್ನು ಸ್ವಚ್ಛಗೊಳಿಸುವ ಅದ್ಭುತ ಸಾಮರ್ಥ್ಯದ ಮೂಲಕ ಮನುಕುಲಕ್ಕೆ ಸಂಜೀವಿನಿಯಾಗಿರುವ ಮರಗಳ ಬಗ್ಗೆ ನಮಗೇಕಿಷ್ಟು ನಿಷ್ಕಾರುಣ್ಯ?



ಶ್ರೀಕಂಠಮೂರ್ತಿ